**ದಿನಾಂಕಃ22/07/2025 ರಂದು ಅಸಾಃ3 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

## ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಪಿ ಎ ವಕೀಲರಿಂದಃ

ಅಶ್ವಿನಿ ನನಗೆ 3 ವರ್ಷದಿಂದ ಪರಿಚಯವಿರುತ್ತದೆ. ಅಂದರೆ 2015 ನಿಂದ ಪರಿಚಯ ಇರುತ್ತದೆ. ಚಾಸಾ-2 ರವರು ಆಲೂರು ಕಾಲೇಜಿನಲ್ಲಿ ಓದುತ್ತಿದ್ದರು. ಚಾಸಾ-2 ರವರು ಮೇರ್ವೆ, ನಮ್ಮ ಊರು ಭಕ್ತರವಳ್ಳಿ ಇರುತ್ತದೆ. ಮೇರ್ವೆ ಗ್ರಾಮದಿಂದ ನಮ್ಮ ಊರಿಗೆ ಗಾಡಿಯಲ್ಲಿ ಹೋದರೆ 5 ನಿಮಿಷ ಬೇಕಾಗುತ್ತದೆ. ನಡೆದುಕೊಂಡು ಸುಮಾರು 15 ನಿಮಿಷವಾಗುತ್ತದೆ. ಸುಮಾರು 2 ಕಿ.ಮೀ ಇರಬಹುದು. ಕಾಲೇಜಿನಲ್ಲಿ ಐಡಿ ಕಾರ್ಡ್ ಮತ್ತು ಬಸ್ ಪಾಸ್ಸು ಇರುತ್ತದೆ ಎಂದರೆ ಸರಿ. ಕಾಲೇಜಿನಲ್ಲಿ ಪ್ರತಿ ದಿನ ಹಾಜರಾತಿಯನ್ನು ತೆಗೆಯುತ್ತಾರೆ ಎಂದರೆ ಸರಿ.

ಚಾಸಾ-2 ರವರಿಗೆ ಕಾಲೇಜಿನ ಸಮಯ ಎಷ್ಟು ಎಂದು ನನಗೆ ಗೊತ್ತಿಲ್ಲ. ಮೇರ್ವೆನಿಂದ ಆಲೂರು ಕಾಲೇಜಿಗೆ ಬಸ್ಸಿನಲ್ಲಿ ಹೋದರೆ ಸುಮಾರು ಅರ್ಧ ಗಂಟೆಯಾಗುತ್ತದೆ. ಮೇರ್ವೆಯಿಂದ ಎಲ್ಲರೂ ಬಂದು ನಮ್ಮ ಊರಿಗೆ ಬಂದು ಅಲ್ಲಿಂದ ಹೊನ್ನೇನಹಳ್ಳಿ ಗೇಟಿಗೆ ಬಂದು ಬಸ್ಸು ಹತ್ತುತ್ತಾರೆ. ಸುಮಾರು ಜನರು ಓದಲು ಮೇರ್ವೆಯಿಂದ ಆಲೂರಿಗೆ ಓದಲು ಬರುತ್ತಾರೆ ಎಂದರೆ ಸರಿ. ಕೆಲವರು ದ್ವಿಚಕ್ರ ವಾಹನದಲ್ಲಿ ಬರುತ್ತಾರೆ, ಕೆಲವರು ಬಸ್ಸಿನಲ್ಲಿ ಹಾಗೂ ನಡೆದುಕೊಂಡು ಬರುತ್ತಾರೆ. ಸಂಜೆ ನಡೆದುಕೊಂಡು ಮೇರ್ವೆ ಗ್ರಾಮಕ್ಕೆ ಹೋಗುತ್ತಾರೆ ಎಂದರೆ ಸರಿ. ನಾನು ಭಕ್ತರವಳ್ಳಿಯಿಂದ ಮೇರ್ವೆಗೆ ಹೋಗಿ ಬಂದು ಮಾಡಿರುತ್ತೇನೆ. ಆಕಡೆ ಈ ಕಡೆ ಹೊಲ ಗದ್ದೆ ಇದ್ದು, ಜೋಳ ಬೆಳೆಯುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಸುಮಾರು 11 ಹಸುಗಳು ಇದ್ದವು ನಮ್ಮ ತಾತ ಮೇಯಿಸುತ್ತಿದ್ದರು. ನಮ್ಮ ಹೊಲಗದ್ದೆ ಭಕ್ತರವಳ್ಳಿಯಲ್ಲಿರುತ್ತದೆ. ನಮ್ಮ ತಂದೆ ಮತ್ತು ತಾತ ಜಮೀನನ್ನು ನೋಡಿ ಕೊಳ್ಳುತ್ತಾರೆ. ನಮ್ಮ ತಾತ ಒಬ್ಬರೇ ಹಸುವನ್ನು ಮೇಯಿಸುತ್ತಾರೆ.

ಎಡವನಹಳ್ಳಿ ಮೇರ್ವೆ ಹಾಗೂ ಭಕ್ತರವಳ್ಳಿಯ ಮಧ್ಯೆ ಇದೆ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳುವ ದಿನ ನಾನು ಬಸ್ ಇಳಿದು ನಮ್ಮ ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ಚಾಸಾ-2 ರವರು ಭಕ್ತರವಳ್ಳಿಯಿಂದ ಮೇರ್ವೆಗೆ ಹೋದರು ಎಂದರೆ ಸರಿ. ನನ್ನ ಮತ್ತು ಚಾಸಾ-2 ರವರ ಹತ್ತಿರ ಮೊಬೈಲ್ ಇರಲಿಲ್ಲ.

ಆರೋಪಿ ನಮ್ಮ ಊರಿನವರು ಆದರೆ ಅವರು ನಮ್ಮ ಸಂಬಂಧಿಕರಲ್ಲ. ಎಡವಳ್ಳಿಯ ಮನೆಯ ಹತ್ತಿರ ಕೂಗಿದರೆ ಕೇಳಿಸುತ್ತದೆ, ಮುಂದೆ ಹೋದರೆ ಪೂರ್ತಿ ಕಾಡು ಇರುತ್ತದೆ ಕೇಳುವುದಿಲ್ಲ. ಮನೆಯಿಂದ 2 ನಿಮಿಷ ಮುಂದೆ ಹೋದರೆ ಕಾಡು ಸಿಗುತ್ತದೆ. ಭಕ್ತರವಳ್ಳಿಯಿಂದ ಮೇರ್ವೆಗೆ ಜನರು ಓಡಾಡುತ್ತಾರೆ ಆದರೆ ಆ ದಿನ ಯಾರ ಇರಲಿಲ್ಲ. ಭಕ್ತರವಳ್ಳಿಯಿಂದ ಮೇರ್ವೆಗೆ ಹೋಗುವಾಗ ಜನರು ಓಡಾಡುವುದು ಕೇಳಿಸುವುದಿಲ್ಲ.

ನಮ್ಮ ತಾತ ಹಸು ಮೇಯಿಸಲು ಬೆಳಿಗ್ಗೆ 10.00 ಗಂಟೆಗೆ ಹೋದರೆ ಸಂಜೆ 6.00-7.00 ಗಂಟೆಗೆ ವಾಪಸ್ಸು ಬರುತ್ತಿದ್ದರು. ಸಂಜೆ 6.00-7.00 ಗಂಟೆಗೆ ಕತ್ತಲಾಗಿರುತ್ತದೆ ಎಂದರೆ ಸರಿ. ನಮ್ಮ ತಾತನಿಗೆ ಆ ಸಮಯದಲ್ಲಿ 90 ವರ್ಷವಾಗಿತ್ತು. ಎಡವನಹಳ್ಳಿಯಿಂದ ಮೇರ್ವೆಗೆ ಹೋಗುವ ದಾರಿಯಲ್ಲಿ ವಿದ್ಯುತ್ ಸೌಕರ್ಯ ಇರುವುದಿಲ್ಲ. ನನ್ನ ತಾತನಿಗೆ 90 ವರ್ಷವಾಗಿರುವುದರಿಂದ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

ಬಸ್ ಇಳಿದ ನಂತರ ನಾನೊಬ್ಬಳೇ ಆ ದಿನ ಮನೆಗೆ ಹೋಗಿರುತ್ತೇನೆ, ನಮ್ಮ ಜೊತೆ ಬೇರೆ ಯಾರು ಬಂದಿರುವುದಿಲ್ಲ . ಚಾಸಾ-2 ರವರು ರಸ್ತೆಯ ಪಕ್ಕದ ಜಮೀನಿನ ಜೋಳ ಕೀಳಲು ಹೋಗಿ ಬರುವಾಗ ಬೇಲಿ ತಾಗಿ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರ ಮನೆಗೆ ಗೊತ್ತಾದರೆ ಮನೆಯಲ್ಲಿ ಚಾಸಾ-2 ರವರಿಗೆ ಬೈಯುತ್ತಾರೆ ಎಂದು ಈ ಸುಳ್ಳು ಘಟನೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮನೆಗೆ ಹೋದ ಮೇಲೆ, ಚಾಸಾ-2 ರವರಿಗೆ ಏನಾಯಿತು ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆರೋಪಿಯವರು ಚಾಸಾ-2 ರವರ ಮಾನಭಂಗ ಮಾಡಲು ಪ್ರಯತ್ನ ಪಟ್ಟರು ಎಂದು ಅವರು ಕಥೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-2 ರವರ ತಂದೆ ಅವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೆ. ಹಣಕಾಸಿನ ವ್ಯವಹಾರದಲ್ಲಿ ಆರೋಪಿಗೂ ಚಾಸಾ-2 ರವರ ತಂದೆಗೂ ತಕರಾರು ಇತ್ತು ಎಂದರೆ ಗೊತ್ತಿಲ್ಲ. ಚಾಸಾ-2 ರವರ ವೈಯಕ್ತಿಕ ವಿಚಾರ, ಕೌಟಿಂಬಿಕ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-2 ರವರು ನನಗೆ ಯಾವುದೇ ವಿಚಾರ ಹೇಳಿಲ್ಲ, ನಾನು ಅವಳು ಸ್ನೇಹಿತರಾಗಿರುವುದರಿಂದ ಆಕೆಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ಸಂಬಂಧಪಟ್ಟ ಬೈಕನ್ನು ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-2 ರವರು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ. ಈ ವಿಚಾರದಲ್ಲಿ ಪಂಚಾಯಿತಿಯಾಗಿರುವ ಬಗ್ಗೆ ಗೊತ್ತಿಲ್ಲ. ಆಲೂರು ಪೊಲೀಸ್ ಠಾಣೆ ನಮ್ಮ ಊರಿನಿಂದ ಅರ್ಧ ಗಂಟೆ ಇರುತ್ತದೆ. ಪೊಲೀಸರು ಅದೇ ದಿನ ಸ್ಥಳಕ್ಕೆ

ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನನ್ನು ಪೊಲೀಸರು ದೂರು ಕೊಟ್ಟ ಮಾರನೇ ದಿನ ಠಾಣೆಯಲ್ಲಿ ವಿಚಾರಣೆ ಮಾಡಿರುತ್ತಾರೆ. ಆಗ ಸಮಯ 11.00 ಗಂಟೆಯಾಗಿರುತ್ತದೆ. ಆ ದಿನ ನಾನು ಕಾಲೇಜಿಗೆ ಹೋಗಿರುವುದಿಲ್ಲ. ನನ್ನ ಜೊತೆ ಠಾಣೆಗೆ ತಂದೆ ಬಂದಿದ್ದರು . ಬೇರೆ ಪೊಲೀಸರು ಅಲ್ಲಿದ್ದರು. ಆರೋಪಿಯನ್ನು ನಾನು ಯಾವತ್ತು ನೋಡಿಲ್ಲ, ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ